ಲೇಟಾಗಿದೆಯೋ ಗೊತ್ತಿಲ್ಲ. ಮಾನ್ಯ ಸದಸ್ಯರುಗಳು ಹೇಳಿರುವ ಸಲಹೆಗಳನ್ನು ನಾನು ಯಥೋಚಿತವಾಗಿ ಒಪ್ಪಿಕೊಂಡಿದ್ದೇನೆ. ತಪ್ಪಾಗಿರುವ ಬಗ್ಗೆ ತಾವು ಹೇಳಿದ್ದೀರಿ. ಅದನ್ನು ಸರಿಪಡಿಸಿಕೊಳ್ಳುತ್ತೇವೆ ಎಂದು ನಾನು ಹೇಳುತ್ತಿದ್ದೇನೆ. ಹೊಸ ಸರ್ಕಾರ ಬಂದಿರುವುದರಿಂದ ಸ್ವಲ್ಪ ತೊಂದರೆಯಾಗಿದೆ. ಇದೆಲ್ಲವನ್ನೂ ನಾನು ಸ್ಟ್ರೀಮ್ ಲೈನ್ ಮಾಡುತ್ತೇನೆ.

ಅಧ್ಯಕ್ಷರು : ಮುಂದಿನ ತಿಂಗಳು 10ನೇ ತಾರೀಖಿನಿಂದ ಅಧಿವೇಶನ ಪುನಃ ಪ್ರಾರಂಭ ಆಗುತ್ತದೆ. ಆ ಹೊತ್ತಿಗಾದರೂ ಉತ್ತರಗಳು ಮಾನ್ಯ ಸದಸ್ಯರುಗಳಿಗೆ ಸರಿಯಾಗಿ ತಲುಪುವಂತಹ ವ್ಯವಸ್ಥೆಯನ್ನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಮಾಡಲಿ.

ವಿತ್ತೀಯ ಕಾರ್ಯಕಲಾಪಗಳು

1999-2000ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತನ್ನು) ಸಭೆಯ ಮುಂದೆ ಮಂಡಿಸುವುದು

ಶ್ರೀ ಶಿವಣ್ಣ (ಹಣಕಾಸು ರಾಜ್ಯ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, 1999-2000ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತನ್ನು) ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1999-2000ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತನ್ನು) ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಶಿವಣ್ಣ (ಹಣಕಾಸು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, 1999-2000ನೇ ಸಾಲಿನ ಪೂರಕ ಅಂದಾಜುಗಳ (ಅಂತಿಮ ಕಂತನ್ನು) ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

11.40 ಎ.ಎಂ

ಅಧ್ಯಕ್ಷರ ಅಪ್ಪಣೆ ಮೇರೆಗೆ

ಗ್ರಾಮಪಂಚಾಯಿತಿಗಳಲ್ಲಿ ಎಸ್.ಸಿ./ಎಸ್.ಟಿಗಳಿಗೆ ಮೀಸಲಾತಿ ನೀಡುವ ಕುರಿತು ಚರ್ಚೆ

ಶ್ರೀ ಎ. ನಾರಾಯಣಸ್ವಾಮಿ (ಆನೇಕಲ್) : ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳ ಗಮನ ಸೆಳೆಯುವುದಕ್ಕೆ ನಾನು [illegible]ಪಡುತ್ತೇನೆ. ಈಗಾಗಲೇ ಇಡೀ ರಾಜ್ಯದಲ್ಲಿ ಗ್ರಾಮ